**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.829/2017**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸರು, ಸೇಡಂ.

-:: ವಿರುದ್ಧ ::-

ಆರೋಪಿತರುಃ1 ನಾಗಪ್ಪ ತಂದೆ ಹುಸನಪ್ಪ ಹೊಡೆಬಿರನಳ್ಳಿ,
ವಃ 27 ವರ್ಷ, ಉಃ ಸೇಂದಿ ಮಾರಾಟ,

2 ಸುಭದ್ರಮ್ಮ ಗಂಡ ಹುಸನಪ್ಪ ಹೊಡೆಬಿರನಳ್ಳಿ
ವಃ 50 ವರ್ಷ, ಉಃ ಸೇಂದಿ ಮಾರಾಟ,
ಇಬ್ಬರೂ ಸಾಃ ಬಸವನಗರ, ಸೇಡಂ.

----

**ದೋ ಷಾ ರೋ ಪ ಣೆ**

ನಾನು ಶ್ರೀ ಮಹಾದೇವ ಕಾನಟ್ಟಿ, ಬಿಕಾಂ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತರಾದ ನೀವು ದಿನಾಂಕ 17-04-2012 ರಂದು ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಸೇಡಂ ಅಬಕಾರಿ ಠಾಣಾ ಹದ್ದಿಯಲ್ಲಿರುವ ಸೇಡಂ ಪಟ್ಟಣದ ಬಸವ ನಗರದ ನಿಮ್ಮ ಮನೆಯಲ್ಲಿ ನೀವು ಅಕ್ರಮವಾಗಿ ಕಲಬೆರಕೆ ಸೇಂದಿಯನ್ನು ಸಂಗ್ರಹಿಸಿಟ್ಟು ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾಗ, ಚಾಸಾ-5, 6, 8 ರವರು ಕೂಡಿಕೊಂಡು, ಚಾಸಾ-1 ರಿಂದ 4 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ, ಆರೋಪಿತರಾದ ನಿಮ್ಮ ವಶದಲ್ಲಿದ್ದ 1 ಲೀಟರ್ ಅಳತೆಯ ಒಟ್ಟು 100 ಲೀಟರ್ ಕಲಬೆರಕೆ ಸೇಂದಿ ಪಾಕೆಟ್‌ಗಳನ್ನು ವಶಪಡಿಸಿಕೊಂಡಿದ್ದು, ಅಲ್ಲದೇ ಸದರಿ ಕಲಬೆರಕೆ ಸೇಂದಿ ಸೇವನೆಯಿಂದ ಮಾನವ ಜೀವಕ್ಕೆ ಹಾನಿಯಾಗುತ್ತದೆಂದು ಗೊತ್ತಿದ್ದರೂ ಸಹ ಕಲಬೆರಕೆ ಸೇಂದಿ ಮಾರಾಟ ಮಾಡಿದ್ದರಿಂದ, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ಹಾಗೂ ಭಾ.ದಂ.ಸಂ. 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

3/1/20

ದಿನಾಂಕಃ 03-01-2020 ಪ್ರ.ದ.ನ್ಯಾ.ದಂ. ಸೇಡಂ.